For more job news visit : www.kpscvaani.com

ಕರ್ನಾಟಕ ಸರ್ಕಾರ
ರಾಷ್ಟ್ರೀಯ ಆರೋಗ್ಯ ಅಭಿಯಾನ,
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ (ರಿ), ರಾಯಚೂರು–584101 .
(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯ ಅಂಗ ಸಂಸ್ಥೆ)
ಇ ಮೇಲ್ ವಿಳಾಸ: rchoraichur@gmail.com ದೂರವಾಣಿ: 08532-225010

ಸಂಖ್ಯೆ : ಜಿ.ಆ&ಕು.ಕ.ಅ/ಎನ್.ಹೆಚ್.ಎಂ/ಗು-ಸಿಬ್ಬಂದಿ/59/2024-25 ದಿನಾಂಕ: 07.08.2024.

ಗೆ,
ಹಿರಿಯ ಸಹಾಯಕ ನಿರ್ದೇಶಕರು,
ವಾರ್ತಾ ಮತ್ತು ಪ್ರಚಾರ ಇಲಾಖೆ,
ರಾಯಚೂರು.

ಮಾನ್ಯರೇ,

ವಿಷಯ:– ಪತ್ರಿಕಾ ಪ್ರಕಟಣೆಯನ್ನು ದಿನಪತ್ರಿಕೆಯಲ್ಲಿ ಪ್ರಕಟಿಸುವ ಕುರಿತು.

ಈ ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ, ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಜಿಲ್ಲೆಯಲ್ಲಿ ಖಾಲಿ ಇರುವ ಹುದ್ದೆಗಳಿಗೆ ಸಂಬಂಧಿಸಿದಂತೆ, ಈ ಪತ್ರದೊಂದಿಗೆ ಲಗತ್ತಿಸಿದ ಅನುಬಂಧದಂತೆ, ಒಂದು ಸ್ಥಳೀಯ ಮತ್ತು ರಾಜ್ಯ ಮಟ್ಟದ ದಿನಪತ್ರಿಕೆಯಲ್ಲಿ ಪ್ರಕಟಿಸಲು ಕೋರಿದೆ ಹಾಗೂ ಈ ಪ್ರಕಟಣೆಯ ವೆಚ್ಚವನ್ನು ನಮ್ಮ ಕಾರ್ಯಲಯದಿಂದ ಭರಿಸಲಾಗುವುದು.

ಸದಸ್ಯ ಕಾರ್ಯದರ್ಶಿಗಳು,
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ,
ರಾಯಚೂರು.

ಪ್ರತಿಯನ್ನು ಇವರ ದಯಾಪರ ಮಾಹಿತಿಗಾಗಿ ಸಲ್ಲಿಸಲಾಗಿದೆ :

1. ಮಾನ್ಯ ಟೆಂಡರ್ ಜೂಡೀಷಿಯಲ್ ಅಧಿಕಾರಿಗಳು ಹಾಗೂ ಮಾನ್ಯ ಜಿಲ್ಲಾಧಿಕಾರಿಗಳು, ರಾಯಚೂರು.
2. ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ರಾಯಚೂರು.
3. ಮಾನ್ಯ ರಾಜ್ಯ ಕಾರ್ಯಕ್ರಮ ವ್ಯವಸ್ಥಾಪಕರು, ಎನ್.ಹೆಚ್.ಎಮ್ ಬೆಂಗಳೂರು.
4. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ರಾಯಚೂರು ಇವರ ಮಾಹಿತಿಗಾಗಿ ಸಲ್ಲಿಸಿದೆ.
5. ಈ ಕಛೇರಿಯ ಸೂಚನಾ ಫಲಕಕ್ಕೆ.
6. ಕಛೇರಿ ಪ್ರತಿ.

For more job news visit : www.kpscvaani.com

ಕರ್ನಾಟಕ ಸರ್ಕಾರ

ರಾಷ್ಟ್ರೀಯ ಆರೋಗ್ಯ ಅಭಿಯಾನ,

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ (ರಿ), ರಾಯಚೂರು–584101 .

(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯ ಅಂಗ ಸಂಸ್ಥೆ)

ಇ ಮೇಲ್ ವಿಳಾಸ: rchoraichur@gmail.com ದೂರವಾಣಿ: 08532-225010

ಸಂಖ್ಯೆ : ಜಿ.ಆ.&ಕು.ಕ.ಅ/ಎನ್.ಹೆಚ್.ಎಂ/ಗು-ಸಿಬ್ಬಂದಿ/57/2024-25 ದಿನಾಂಕ: 07.08.2024.

ನೇಮಕಾತಿ ಪ್ರಕಟಣೆ

ರಾಯಚೂರು ಜಿಲ್ಲೆಯ ರಾಷ್ಟ್ರೀಯ ಆರೋಗ್ಯ ಅಭಿಯಾನ ಯೋಜನೆದಡಿ ಈ ಕೆಳಗೆ ತೋರಿಸಿದ ಗುತ್ತಿಗೆ ಆಧಾರದ ಮೇಲೆ ತಜ್ಞ ವೈದ್ಯರು / ಅರೆ ವೈದ್ಯಕೀಯ ಸಿಬ್ಬಂದಿಯ ಹುದ್ದೆಗಳನ್ನು ತಾತ್ಕಾಲಿಕವಾಗಿ ಮೆರಿಟ್ ಕಂ. ರೋಷ್ಟರ್ ಮೂಲಕ ಗುತ್ತಿಗೆ ಆಧಾರದ ಮೇಲೆ ಮುಂದಿನ ಆದೇಶದವರೆಗೆ ಭರ್ತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಮಾತ್ರ ಅರ್ಜಿಗಳನ್ನು ಸಲ್ಲಿಸುವುದು. ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ : 09-08-2024 ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 29-08-2024 ಅರ್ಜಿ ಸಲ್ಲಿಸಬೇಕಾದ ವೆಬ್‌ಸೈಟ್ : https://raichur.nic.in ಅರ್ಜಿ ಸಲ್ಲಿಸಲು ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಷರತ್ತು ಹಾಗೂ ನಿಬಂಧನೆಗಳು ಅನ್ವಯಿಸುತ್ತವೆ.

ಕ್ರಮ ಸಂಖ್ಯೆ	ಹುದ್ದೆಗಳ ವಿವರ	ವಿದ್ಯಾರ್ಹತೆ	ಮಾಸಿಕ ವೇತನ	ಮೀಸಲಾತಿ	ವಯೋಮಿತಿ
1	ಸ್ತ್ರೀ ರೋಗ ತಜ್ಞರು – 3 ಹುದ್ದೆಗಳು (ಸಾರ್ವಜನಿಕ ಆಸ್ಪತ್ರೆ ದೇವದುರ್ಗ–01, ಎಮ್.ಸಿ.ಹೆಚ್. ಮಾನ್ವಿ–01 ಮತ್ತು ಸಿ.ಹೆಚ್.ಸಿ. ಜಾಲಹಳ್ಳಿ–01)	ಡಿ.ಜಿ.ಓ./ ಡಿ.ಎನ್.ಬಿ./ ಎಮ್.ಡಿ. ಓ.ಬಿ.ಜಿ. ವಿದ್ಯಾರ್ಹತೆ ಹೊಂದಿರಬೇಕು.	ರೂ.1,30,000/- ಗಳು		70 ವರ್ಷ ಮೀರಿರಬಾರದು
2	ಮಕ್ಕಳ ತಜ್ಞರು – 2 ಹುದ್ದೆಗಳು (ಸಾರ್ವಜನಿಕ ಆಸ್ಪತ್ರೆ ಸಿಂಧನೂರು–01 ಮತ್ತು ಮಾನ್ವಿ–01)	ಡಿ.ಸಿ.ಹೆಚ್./ ಡಿ.ಎನ್.ಬಿ./ ಎಮ್.ಡಿ. ಪಿಡಿಯಾಟ್ರಿಕ್ಸ್ ವಿದ್ಯಾರ್ಹತೆ ಹೊಂದಿರಬೇಕು.	ರೂ.1,30,000/- ಗಳು		70 ವರ್ಷ ಮೀರಿರಬಾರದು
3	ಎಸ್.ಎನ್.ಸಿ.ಯು. ಎಂ.ಬಿ.ಬಿ.ಎಸ್. ವೈದ್ಯರು – 03 ಹುದ್ದೆಗಳು (ರಿಮ್ಸ್ ಬೋಧಕ ಆಸ್ಪತ್ರೆ ರಾಯಚೂರು)	ಎಂ.ಬಿ.ಬಿ.ಎಸ್. ಪದವಿ ಹೊಂದಿರಬೇಕು, ಕಡ್ಡಾಯವಾಗಿ ಇಂಟ್ರನ್ಸ್‌ಶಿಪ್ ಪೂರೈಸಿರಬೇಕು ಹಾಗೂ ಕೆ.ಎಂ.ಸಿ. ನೋಂದಣಿ ಹೊಂದಿರತಕ್ಕದ್ದು.	ರೂ.55,000/- ಗಳು		ಗರಿಷ್ಠ–45 ವರ್ಷ ಮೀರಿರಬಾರದು
4	ತಾಯಿ ಆರೋಗ್ಯ ಕಾರ್ಯಕ್ರಮ ಹೆಚ್.ಡಿ.ಯು. ಎಂ.ಬಿ.ಬಿ.ಎಸ್. ವೈದ್ಯರು – 04 ಹುದ್ದೆಗಳು (ರಿಮ್ಸ್ ಬೋಧಕ ಆಸ್ಪತ್ರೆ ರಾಯಚೂರು)	ಎಂ.ಬಿ.ಬಿ.ಎಸ್. ಪದವಿ ಹೊಂದಿರಬೇಕು, ಕಡ್ಡಾಯವಾಗಿ ಇಂಟ್ರನ್ಸ್‌ಶಿಪ್ ಪೂರೈಸಿರಬೇಕು ಹಾಗೂ ಕೆ.ಎಂ.ಸಿ. ನೋಂದಣಿ ಹೊಂದಿರತಕ್ಕದ್ದು.	ರೂ.50,000/- ಗಳು		70 ವರ್ಷ ಮೀರಿರಬಾರದು
5	ಐ.ಸಿ.ಯು./ ಹೆಚ್.ಡಿ.ಯು. ಎಂ.ಬಿ.ಬಿ.ಎಸ್. ವೈದ್ಯರು – 11 ಹುದ್ದೆಗಳು (ಸಾರ್ವಜನಿಕ ಆಸ್ಪತ್ರೆ ದೇವದುರ್ಗ–02, ಮಾನ್ವಿ–03, ಸಿಂಧನೂರು–03 ಮತ್ತು ಲಿಂಗಸೂಗೂರು–03)	ಎಂ.ಬಿ.ಬಿ.ಎಸ್. ಪದವಿ ಹೊಂದಿರಬೇಕು, ಕಡ್ಡಾಯವಾಗಿ ಇಂಟ್ರನ್ಸ್‌ಶಿಪ್ ಪೂರೈಸಿರಬೇಕು ಹಾಗೂ ಕೆ.ಎಂ.ಸಿ. ನೋಂದಣಿ ಹೊಂದಿರತಕ್ಕದ್ದು.	ರೂ.50,000/- ಗಳು		65 ವರ್ಷ ಮೀರಿರಬಾರದು
6	ಎನ್.ಯು.ಹೆಚ್.ಎಂ. ಎಂ.ಬಿ.ಬಿ.ಎಸ್. ವೈದ್ಯರು – 01 ಹುದ್ದೆಗಳು (ನಗರ ಆರೋಗ್ಯ ಕೇಂದ್ರ ಹರಿಜನವಾಡ–01)	ಎಂ.ಬಿ.ಬಿ.ಎಸ್. ಪದವಿ ಹೊಂದಿರಬೇಕು, ಕಡ್ಡಾಯವಾಗಿ ಇಚಟ್ರನ್ಸ್‌ಶಿಪ್ ಪ್ರರೈಸಿರಬೇಕು ಹಾಗೂ ಕೆ.ಎಂ.ಸಿ. ನೋಂದಣಿ ಹೊಂದಿರತಕ್ಕದ್ದು.	ರೂ. 46895/- ಗಳು		65 ವರ್ಷ ಮೀರಿರಬಾರದು

For more job news visit : www.kpscvaani.com

7	ನಮ್ಮ ಕ್ಲಿನಿಕ್ ಎಂ.ಬಿ.ಬಿ.ಎಸ್. ವೈದ್ಯರು – 04 ಹುದ್ದೆಗಳು (ನಮ್ಮ ಕ್ಲಿನಿಕ್ ಮಸ್ಕಿ–01, ಲಿಂಗಸೂಗೂರು–01, ಸಿರವಾರ–01, ಹಟ್ಟಿ–01)	ಎಂ.ಬಿ.ಬಿ.ಎಸ್.. ಪದವಿ ಹೊಂದಿರಬೇಕು, ಕಡ್ಡಾಯವಾಗಿ ಇಚಿಟ್ರನ್ಶಿಪ್ ಪ್ರರೈಸಿರಬೇಕು ಹಾಗೂ ಕೆ.ಎಂ.ಸಿ. ನೋಂದಣಿ ಹೊಂದಿರತಕ್ಕದ್ದು.	ರೂ. 46895/– ಗಳು		65 ವರ್ಷ ಮೀರಿರಬಾರದು
8	ಕ್ಷೇತ್ರ ಕಾರ್ಯಕ್ರಮ ವ್ಯವಸ್ಥಾಪಕರು 1 ಹುದ್ದೆ	ಎಂ.ಬಿ.ಎ./ ಬಿ.ಬಿ.ಎಂ. ಪದವಿಯನ್ನು ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಲ್ಲಿ ಮಾತ್ರ ಪಡೆದಿರಬೇಕು ಹಾಗೂ ಗಣಕಯಂತ್ರದಲ್ಲಿ ಕನ್ನಡ, ಇಂಗ್ಲೀಷ್ ಪವರ್ ಪಾಯಿಂಟ್ ಹಾಗೂ ಟ್ಯಾಲಿ ಇ.ಆರ್.ಪಿ.–9 ಜ್ಞಾನ ಹೊಂದಿರಬೇಕು ಸದರಿ ಕ್ಷೇತ್ರದಲ್ಲಿ 4 ವರ್ಷಗಳು ಅನುಭವ ಹೊಂದಿರತಕ್ಕದ್ದು.	ರೂ.18,384/– ಗಳು		40 ವರ್ಷ ಮೀರಿರಬಾರದು
9	ತಾಲೂಕಾ ಆಶಾ ಮೇಲ್ವಿಚಾರಕರು – 1 ಹುದ್ದೆ (ಸಿಂಧನೂರು)	1) ಶುಶ್ರೂಷಕಿಯಾಗಿರಬೇಕು ಅಥವಾ ಜಿ.ಎನ್.ಎಂ./ ಬಿ.ಎಸ್ಸಿ. ನರ್ಸಿಂಗ್ ಅಥವಾ ಡಿಪ್ಲೋಮಾ ನರ್ಸಿಂಗ್ (ಎ.ಎನ್.ಎಂ.) ಆಯುಷ್ ಕೊರ್ಸಗಳಲ್ಲಿ ತೇರ್ಗಡೆಯಾಗಿರಬೇಕು ಹಾಗೂ 2 ರಿಂದ 3 ವರ್ಷಗಳು ತರಬೇತಿಯಲ್ಲಿ ಅನುಭವ ಹೊಂದಿರಬೇಕು. ಅಥವಾ ಪಬ್ಲಿಕ್ ಹೆಲ್ತ್‌ಡಿಪ್ಲೋಮಾ/ ಸೋಷ್ಯಲ್ ವರ್ಕ/ ಸೋಷ್ಯಲ್ ಸೈನ್ಸ್‌ನಲ್ಲಿ ಪಧವಿ/ ಸ್ನಾತಕೊತ್ತರ ಪಧವಿ ಹಾಗೂ ಮೂರಕ್ಕಿಂತ ಹೆಚ್ಚು ವರ್ಷಗಳ ತರಬೇತಿಯಲ್ಲಿ ಅನುಭವ. 2) ಕರ್ನಾಟಕ ನರ್ಸಿಂಗ್ ಕೌನ್ಸಿಲ್‌ನಲ್ಲಿ ಕಡ್ಡಾಯವಾಗಿ ನೊಂದಣಿಯಾಗಿರಬೇಕು. 3) ಕನ್ನಡ ಭಾಷೆಯಲ್ಲಿ ವ್ಯವಹರಿಸುವುದು ಕಡ್ಡಾಯವಾಗಿರಬೇಕು. 4) ಕಂಪ್ಯೂಟರ್ ಜ್ಞಾನ (ಇಂಟರ್‌ನೆಟ್ ಬ್ರೌಸಿಂಗ್, ಇ–ಮೇಲ್, ಎಂ.ಎಸ್. ಆಫೀಸ್‌ಗಳ) ಪರಿಣೀತಿ ಹೊಂದಿರಬೇಕು. 5) ಈಗಾಗಲೇ ಸದರಿ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಿದ ಹಾಗೂ ಆಶಾ ಫೆಸಿಲಿಟೇಟರ್ ಆಗಿ ಕರ್ತವ್ಯ ನಿರ್ವಹಿಸಿದ ಅಭ್ಯರ್ಥಿಗಳಿಗೆ ಅದ್ಯತೆ ನೀಡಲಾಗುವುದು.	ರೂ.13,915/– ಗಳು	ಮೇರಿಟ್ ಕಂ. ರೋಸ್ಟರ್ ನಿಯಮದಡಿ ಆಯ್ಕೆ ಮಾಡಿಕೊಳ್ಳಲಾಗುವುದು.	ಗರಿಷ್ಠ–50 ವರ್ಷ ಮೀರಿರಬಾರದು
10	ಮಕ್ಕಳ ಆರೋಗ್ಯ ಕಾರ್ಯಕ್ರಮ ಶುಶ್ರೂಷಕರು – 32 ಹುದ್ದೆಗಳು (ರಿಮ್ಸ್ ಬೋಧಕ ಆಸ್ಪತ್ರೆ ರಾಯಚೂರು–06, ಸಾರ್ವಜನಿಕ ಆಸ್ಪತ್ರೆ ಸಿಂಧನೂರು–04, ದೇವದುರ್ಗ–04, ಲಿಂಗಸೂಗೂರು–04, ಮಾನ್ವಿ–04, ಎಫ್.ಆರ್.ಯು. ಮುದುಗಲ್–04, ಸಮುದಾಯ ಆರೋಗ್ಯ ಕೇಂದ್ರ ಅರಕೇರಾ–02, ಜಾಲಹಳ್ಳಿ–02, ಕವಿತಾಳ್–02)	1) ಬಿ.ಎಸ್ಸಿ. ನರ್ಸಿಂಗ್ ಅಥವಾ ಪೋಸ್ಟ್ ಬೆಸಿಕ್ ನರ್ಸಿಂಗ್ ಬಿ.ಎಸ್ಸಿ. (ನರ್ಸಿಂಗ್) ಅಥವಾ ಡಿಪ್ಲೋಮಾ ನರ್ಸಿಂಗ್ ಕರ್ನಾಟಕ ಸರ್ಕಾರದ ಮಾನ್ಯತೆ ಪಡೆದ ಸಂಸ್ಥೆಗಳಲ್ಲಿ ಮಾತ್ರ ಪಡೆದಿರಬೇಕು. 2) ಕರ್ನಾಟಕ ನರ್ಸಿಂಗ್ ಕೌನ್ಸಿಲ್‌ನಲ್ಲಿ ಕಡ್ಡಾಯವಾಗಿ ನೊಂದಣಿಯಾಗಿರಬೇಕು.	ರೂ.14187/–	ಮೇರಿಟ್ ಕಂ. ರೋಸ್ಟರ್ ನಿಯಮದಡಿ ಆಯ್ಕೆ ಮಾಡಿಕೊಳ್ಳಲಾಗುವುದು.	ಗರಿಷ್ಠ–40 ವರ್ಷ ಮೀರಿರಬಾರದು

For more job news visit : www.kpscvaani.com

11	ಕಿರಿಯ ಮಹಿಳಾ ಆರೋಗ್ಯ ಸಹಾಯಕಿ – 3 ಹುದ್ದೆಗಳು (ನಗರ ಆರೋಗ್ಯ ಕೇಂದ್ರ ಎಲ್.ಐ.ಎಸ್. ನಗರ–01, ಹರಿಜನವಾಡ–01, ರಾಗಿಮಾನಗಡ್ಡ–1)	ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯ ತರಬೇತಿಯನ್ನು ಕರ್ನಾಟಕ ಸರ್ಕಾರದ ಮಾನ್ಯತೆ ಪಡೆದ ಶಾಲೆಗಳಲ್ಲಿ ಮಾತ್ರ ಪಡೆದಿರಬೇಕು ಮತ್ತು ಕರ್ನಾಟಕ ನರ್ಸಿಂಗ್ ಕೌನ್ಸಿಲ್‌ನಲ್ಲಿ ನೊಂದಣಿಯಾಗಿರಬೇಕು.	ರೂ. 15397/-	ಮೇರಿಟ್ ಕಂ. ರೋಸ್ಟರ್ ನಿಯಮದಡಿ ಆಯ್ಕೆ ಮಾಡಿಕೊಳ್ಳಲಾಗುವುದು.	ಗರಿಷ್ಠ–40 ವರ್ಷ ಮೀರಿರಬಾರದು
12	ಆರೋಗ್ಯ ನಿರೀಕ್ಷಣಾಧಿಕಾಧಿಕಾರಿಗಳು – 10 ಹುದ್ದೆ (ನಗರ ಆರೋಗ್ಯ ಕೇಂದ್ರ ಹರಿಜನವಾಡ–01 ಮತ್ತು ಪಿ.ಎಂ.ಅಭೀಮ್ ನಮ್ಮ ಕ್ಲಿನಿಕ್–09 (ನಮ್ಮ ಕ್ಲಿನಿಕ್ ಮಾನ್ವಿ–02, ಸಿರವಾರ–01, ದೇವದುರ್ಗ–01, ರಾಯಚೂರು–01, ಲಿಂಗಸೂಗೂರು–01, ಮಸ್ಕಿ–01, ಹಟ್ಟಿ–01, & ಸಿಂಧನೂರು–01)	ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು ಮತ್ತು ಕರ್ನಾಟಕ ರಾಜ್ಯದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ವಿವಿಧೋದ್ದೇಶ ಮೂಲ ಆರೋಗ್ಯ ಕಾರ್ಯಕರ್ತರ ತರಬೇತಿಯನ್ನು ಹೊಂದಿರಬೇಕು. ಅಥವಾ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು ಮತ್ತು ಕರ್ನಾಟಕ ಅರೆ ವೈದ್ಯಕೀಯ ಮಂಡಳ ನಡೆಸುವ 3 ವರ್ಷಗಳ ಆರೋಗ್ಯ ನಿರೀಕ್ಷಕರ ಡಿಪ್ಲೋಮಾ ಹೊಂದಿರಬೇಕು. ಅಥವಾ ಪಿ.ಯು.ಸಿ. (ವಿಜ್ಞಾನ) ತೇರ್ಗಡೆಯಾಗಿರಬೇಕು ಮತ್ತು ಕರ್ನಾಟಕ ಅರೆ ವೈದ್ಯಕೀಯ ಮಂಡಳ ನಡೆಸುವ 2 ಆರೋಗ್ಯ ನಿರೀಕ್ಷಕರ ಡಿಪ್ಲೋಮಾ ಹೊಂದಿರಬೇಕು.	ರೂ. 15397/-	ಮೇರಿಟ್ ಕಂ. ರೋಸ್ಟರ್ ನಿಯಮದಡಿ ಆಯ್ಕೆ ಮಾಡಿಕೊಳ್ಳಲಾಗುವುದು.	ಗರಿಷ್ಠ–40 ವರ್ಷ ಮೀರಿರಬಾರದು
13	ಆಂಗಸ್ಗೂರು ತಾಲೂಕ ವಿಬಡಿ ತಾಂತ್ರಿಕ ಮೇಲ್ವಿಚಾರಕರು –1	1. ಅಭ್ಯರ್ಥಿಗಳು ಕಡ್ಡಾಯವಾಗಿ ವಿಜ್ಞಾನ ಪದವಿಯಲ್ಲಿ ಜೀವಶಾಸ್ತ್ರ (B.Sc Biology) ವಿಭಾಗದಲ್ಲಿ ಪದವಿಯನ್ನು ಹೊಂದಿರಬೇಕು. ಆಪೇಕ್ಷಿತ ಅರ್ಹತೆ ಹೊಂದಿರುವ ಅಭ್ಯರ್ಥಿಯು ಲಭ್ಯವಿಲ್ಲದಿದ್ದಲ್ಲಿ. ಪಿಯುಸಿ ಪ್ರಥಮ ಮತ್ತು ದ್ವಿತಿಯ ವರ್ಷದಲ್ಲಿ ವಿಜ್ಞಾನ ವಿಷಯವನ್ನು ತೆರ್ಗಡೆಯಾದ ಅಭ್ಯರ್ಥಿಯನ್ನು ಪರಿಗಣಿಸಲಾಗುವುದು. ಅಸಾಧಾರಣ ಸಂದರ್ಭದಲ್ಲಿ ಮಾತ್ರ ಅರ್ಹತೆಯನ್ನು ಸಡಿಲಿಸಲಾಗುವುದು. 2. ಅಭ್ಯರ್ಥಿಗಳು ಚಾಲ್ತಿಯಲ್ಲಿರುವ ದ್ವಿಚಕ್ರ ವಾಹನದ ಪರವಾನಗಿಯನ್ನು ಕಡ್ಡಾಯವಾಗಿ ಹೊಂದಿರತಕ್ಕದ್ದು. 3. ಆರೋಗ್ಯ ಇಲಾಖೆಯಲ್ಲಿ ಅನುಭವ ಹೊಂದಿದವರಿಗೆ ಮತ್ತು ಸ್ಥಳಿಯ ಜಿಲ್ಲೆಯವರಿಗೆ ಮೊದಲ ಆಧ್ಯತೆ ನಿಡಲಾಗುವದು. 4. ಅಭ್ಯರ್ಥಿಯು ಕೇಂದ್ರ ಸ್ಥಾನದಲ್ಲಿ ವಾಸವಾಗಿರಬೇಕು. 5. ಗಣಕಯಂತ್ರ ಜ್ಞಾನ ಮತ್ತು ಕನ್ನಡ ನುಡಿ ಬರೆಯಲು ಬರುವುದು ಕಡ್ಡಾಯ.	ರೂ. 22,000/- (ದ್ವಿಚಕ್ರ ವಾಹನದ ಇಂಧನ & ದಿನಭತ್ಯೆ ಸೇರಿ)	ಮೇರಿಟ್ ಕಂ. ರೋಸ್ಟರ್ ನಿಯಮದಡಿ ಆಯ್ಕೆ ಮಾಡಿಕೊಳ್ಳಲಾಗುವುದು.	40 ವರ್ಷ ಮೀರಿರಬಾರದು

ನೇಮಕಾತಿ ನಿಯಮ ಮತ್ತು ಷರತ್ತು :-

1. ಅರ್ಜಿ ಸಲ್ಲಿಸಲು ಯಾವುದೇ ಶುಲ್ಕವಿರುವುದಿಲ್ಲ.
2. ಅರ್ಜಿಗಳನ್ನು ಕೇವಲ ಆನ್‌ಲೈನ್ ಮೂಲಕ ಸಲ್ಲಿಸುವುದು. ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ : 09-08-2024 ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 29-08-2024.
3. ಅರ್ಜಿಗಳನ್ನು ಆನ್‌ಲೈನ್ ಹೊರತು ಪಡಿಸಿ ಇತರೆ ಯಾವುದೇ ಮೂಲಗಳಿಂದ ಸಲ್ಲಿಸುವ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.
4. ಕರ್ನಾಟಕ ಸರ್ಕಾರದ ಸಾಮಾನ್ಯ ನೇಮಕಾತಿ ನಿಯಮಗಳನ್ವಯ ವಯೋಮಿತಿಯನ್ನು ಪರಿಗಣಿಸಲಾಗುವುದು.
5. ಸದರಿ ಹುದ್ದೆಗಳಿಗೆ ತಪ್ಪು ಮಾಹಿತಿ/ ದಾಖಲೆಗಳನ್ನು ಹಾಜರುಪಡಿಸಿ ನೇಮಕಾತಿ ಹೊಂದಿರುವುದು ದೃಢಪಟ್ಟಲ್ಲಿ ಯಾವುದೇ ಪೂರ್ವ ಮಾಹಿತಿ ನೀಡದೆ ನೇಮಕಾತಿ ರದ್ದು ಪಡಿಸಿ ಅಂತಹ ಅಭ್ಯರ್ಥಿಯ ವಿರುದ್ಧ ಕ್ರಿಮಿನಲ್ ದಾವೆ ಹೂಡಲಾಗುವುದು.
6. ಒಬ್ಬರೇ ಅಭ್ಯರ್ಥಿಯು ವಿವಿಧ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಬಯಸಿದ್ದಲ್ಲಿ, ಪ್ರತಿ ಹುದ್ದೆಗೆ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಬೇಕು.

For more job news visit : www.kpscvaani.com

7. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ ರಾಯಚೂರುರವರ ತೀರ್ಮಾನವೇ ಅಂತಿಮ ತೀರ್ಮಾನವಾಗಿರುತ್ತದೆ.
8. ಹುದ್ದೆಗಳ ಸಂಖ್ಯೆ ಹಾಗೂ ನೇಮಕಾತಿ ಹೆಚ್ಚು ಅಥವಾ ಕಡಿಮೆ ಮಾಡುವ ಹಕ್ಕನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘದಡಿ ಕಾಯ್ದಿರಿಸಲಾಗಿರುತ್ತದೆ.
9. ಸದರಿ ನೇಮಕಾತಿ ಪ್ರಕಟಣೆಯ ವಿವರಗಳನ್ನು ರಾಯಚೂರು ಎನ್.ಐ.ಸಿ. ವೈಬ್‌ಸೈಟ್ ಲಿಂಕ್ https://raichur.nic.in/ ನಲ್ಲಿ ವೀಕ್ಷಿಸಬಹುದಾಗಿದೆ.
10. ತಜ್ಞ ವೈದ್ಯರು ಹಾಗೂ ಇತರೆ ಹುದ್ದೆಗಳ ನೇಮಕಾತಿಯನ್ನು ನಿಗದಿಪಡಿಸಲಾದ ಶೈಕ್ಷಣಿಕ ಅರ್ಹತೆಯಲ್ಲಿ ಪಡೆದ ಅಂಕಗಳು, ಸಂದರ್ಶನ ಮತ್ತು ಸೇವಾನುಭವದ ಆಧಾರದ ಮೇಲೆ ನೇಮಕಾತಿ ಮಾಡಲಾಗುವುದು.
11. ಮಾನ್ಯ ಅಧ್ಯಕ್ಷರು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ ರಾಯಚೂರು ಇವರ ಅಧ್ಯಕ್ಷತೆಯಲ್ಲಿ ಆಯ್ಕೆ ಪ್ರಕ್ರಿಯೆಯನ್ನು ಮೇರಿಟ್ ಕಂ ರೋಸ್ಟರ್ ಮೂಲಕ ಮೀಸಲಾತಿ ನಿಯಮಗಳನ್ವಯ ನೇಮಕಾತಿ ಮಾಡಲಾಗುವುದು. ಎಲ್ಲಾ ಹುದ್ದೆಗಳು ಗುತ್ತಿಗೆ ಆಧಾರದ ಮೇಲೆ ಸಂಪೂರ್ಣ ತಾತ್ಕಾಲಿಕ ಹುದ್ದೆಗಳಾಗಿದ್ದು, ಕಾಲ ಕಾಲಕ್ಕೆ ಸರ್ಕಾರದಿಂದ/ ರಾಜ್ಯ ನಿರ್ದೇಶನಾಲಯದಿಂದ ಹೊರಡಿಸುವ ಆದೇಶದ ಎಲ್ಲಾ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತವೆ.
12. ಕೋವಿಡ್-19 ಸಾಂಕ್ರಾಮಿಕ ರೋಗ ತಡೆಗಟ್ಟುವ ಹಿನ್ನೆಲೆಯಲ್ಲಿ ತಾತ್ಕಾಲಿಕವಾಗಿ ನೇಮಕಾತಿ ಹೊಂದಿ ಕರ್ತವ್ಯ ನಿರ್ವಹಿಸಿರುವ ಅಭ್ಯರ್ಥಿಗಳಿಗೆ ಅದ್ಯತೆ ನೀಡಲಾಗುವುದು. (ಅನುಭವ ಪ್ರಮಾಣ ಪತ್ರ ಸಲ್ಲಿಸುವುದು).
13. ಕಲ್ಯಾಣ ಕರ್ನಾಟಕ ಮೀಸಲಾತಿಯಲ್ಲಿ ಅರ್ಜಿ ಸಲ್ಲಿಸಲು ಇಚ್ಚಿಸುವವರು ಕಡ್ಡಾಯವಾಗಿ ಅನುಚ್ಛೇದ 371 (ಜೆ) ಉಪ ನಿಯಮ 3 (3) ನೇ ನಿಯಮಾನುಸಾರ ಉದ್ಯೋಗಕ್ಕಾಗಿ ಅರ್ಹತಾ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು.
14. ಸ್ಥಳೀಯ ಭಾಷೆ ಕನ್ನಡ ಆಗಿರುವುದರಿಂದ ಅಭ್ಯರ್ಥಿಗಳು ಕಡ್ಡಯವಾಗಿ ಕನ್ನಡ ಭಾಷೆ ಓದಲು ಮತ್ತು ಬರೆಯಲು ತಿಳಿದಿರಬೇಕು.
15. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು, ಜಿಲ್ಲಾ ಯೋಜನಾ ನಿರ್ವಹಣಾ ಘಟಕ ರಾಯಚೂರಿನಲ್ಲಿ ಕಛೇರಿಯ ಸಮಯದಲ್ಲಿ ಸಂಪರ್ಕಿಸಬಹುದು.

ಸದಸ್ಯ ಕಾರ್ಯದರ್ಶಿ,
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ (ರಿ),
ರಾಯಚೂರು.